# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಗುಪ್ತವಾರ್ತೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಿಶೇಷ ಭತ್ಯೆಯನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪತ್ರ ಸಂಖ್ಯೆ:ಆರ್‌ಎಲ್‌ಎಸ್(1)2/2015-16, ದಿನಾಂಕ:24.04.2020.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ರಾಜ್ಯ ಗುಪ್ತವಾರ್ತೆಯ ಘಟಕಕ್ಕೆ ಪೂರ್ಣ ಪ್ರಮಾಣದ ನೇರ ನೇಮಕಾತಿ ಇರುವುದಿಲ್ಲವಾದ್ದರಿಂದ ಬೇರೆ ಬೇರೆ ಘಟಕಗಳಿಂದ ನಿಯೋಜನೆ ಮೇರೆಗೆ ಇಲ್ಲಿನ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿರುತ್ತದೆ. ಈ ಘಟಕದಿಂದ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಮಾಹಿತಿ, ನಿಷೇದಿತ ಸಂಘ ಸಂಸ್ಥೆಗಳ ಚಟುವಟಿಕೆಗಳು, ಭಯೋತ್ಪಾದನೆ ಬಗ್ಗೆ ಹಾಗೂ ಗಣ್ಯ ಮತ್ತು ಅತಿ ಗಣ್ಯ ವ್ಯಕ್ತಿಗಳ ಭದ್ರತೆ ಮಾಹಿತಿ ಸಂಗ್ರಹಣೆ ಪ್ರಚಲಿತ ಸಾಮಾಜಿಕ ಹಾಗೂ ರಾಜಕೀಯ ವಿದ್ಯಮಾನಗಳನ್ನು ಗಣನೆಗೆ ತೆಗೆದುಕೊಂಡು ಚಾಣಾಕ್ಷತನ / ಬುದ್ದಿವಂತಿಕೆಯಿಂದ ಕಾರ್ಯ ನಿರ್ವಹಿಸಲು ಯುವ ಪೊಲೀಸ್ ಸಿಬ್ಬಂದಿಗಳು ರಾಜ್ಯ ಗುಪ್ತವಾರ್ತೆ ಘಟಕಕ್ಕೆ ಹೆಚ್ಚಿನ ಅವಶ್ಯಕತೆ ಇರುವುದರಿಂದ ಬೇರೆ ಘಟಕಗಳಿಂದ ಅಂತಹ ಅರ್ಹ ಪೊಲೀಸ್ ಸಿಬ್ಬಂದಿಗಳನ್ನು ರಾಜ್ಯ ಗುಪ್ತವಾರ್ತೆಗೆ ನಿಯೋಜನೆ ಮೇಲೆ ಬರಲು ಆಕರ್ಷಿಸುವ ಸಲುವಾಗಿ ಹೆಚ್ಚಿನ ಆರ್ಥಿಕ ಸೌಲಭ್ಯ ಒದಗಿಸುವುದು ಸಮಂಜಸವಾಗಿರುತ್ತದೆ. ಆದರೆ, ಬೇರೆ ಘಟಕಗಳಿಗೆ ಹೋಲಿಸಿದರೆ ರಾಜ್ಯ ಗುಪ್ತವಾರ್ತೆ ಘಟಕದ ಅಧಿಕಾರಿ / ಸಿಬ್ಬಂದಿಗಳು ಅತಿ ಕಡಿಮೆ ವಿಶೇಷ ಭತ್ಯೆಯನ್ನು ಪಡೆಯುತ್ತಿರುತ್ತಾರೆ. ಅದೂ ಅಲ್ಲದೆ ವಿಶೇಷ ಭತ್ಯೆಯನ್ನು ಪಡೆಯುವವರಿಗೆ ಕಷ್ಟ ಪರಿಹಾರ ಭತ್ಯೆಯನ್ನು ಕಡಿತಗೊಳಿಸಿರುವುದರಿಂದ ರಾಜ್ಯ ಗುಪ್ತವಾರ್ತೆಯಲ್ಲಿ ಕರ್ತವ್ ನಿರ್ವಹಿಸುತ್ತಿರುವ ಪೊಲೀಸ್ ಪೇದೆಗಳು ರೂ.2200/- ಹಾಗೂ ಮುಖ್ಯ ಪೇದೆಗಳು ರೂ.1000/- ಗಳನ್ನು ಮಾಹೆಯಾನ ಪಡೆಯುವಲ್ಲಿ ವಂಚಿತವಾಗಿರುತ್ತಾರೆಂದು ತಿಳಿಸಿರುತ್ತಾರೆ.

ರಾಜ್ಯ ಗುಪ್ತವಾರ್ತೆ ಘಟಕದಲ್ಲಿ ಪ್ರಸ್ತುತ 1280 ಮಂಜೂರಾತಿ ಬಲವಿದ್ದು ಅದರಲ್ಲಿ 400 ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇರುತ್ತವೆ. ಈ ಘಟಕದಲ್ಲಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿಶೇಷ ಭತ್ಯೆ ಕಡಿಮೆ ಇರುವ ಕಾರಣ ಹಾಗೂ ಕಷ್ಟ ಪರಿಹಾರ ಭತ್ಯೆಯನ್ನು ಕಡಿತಗೊಳಿಸಿರುವುದರಿಂದ ಸದರಿ ಸಿಬ್ಬಂದಿಯವರುಗಳು ತಮ್ಮ ಮಾತೃ ಘಟಕಕ್ಕೆ ಹಿಂದಿರುಗಿಸುವಂತೆ ಒತ್ತಾಯಿಸಿದ್ದು ಸದರಿಯವರುಗಳನ್ನು ಮಾತೃ ಘಟಕಕ್ಕೆ ಹಿಂದಿರುಗಿಸಿದ್ದಲ್ಲಿ ರಾಜ್ಯ ಗುಪ್ತವಾರ್ತೆ ಘಟಕದಲ್ಲಿ ಸಿಬ್ಬಂದಿಗಳ ಕೊರತೆ ಉಂಟಾಗಿ ಎಲ್ಲಾ ಕೆಲಸ ಕಾರ್ಯಗಳಿಗೆ ತೊಡಕಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದ್ದರಿಂದ ರಾಜ್ಯ ಗುಪ್ತವಾರ್ತೆ ಘಟಕದ ಅಧಿಕಾರಿ / ಸಿಬ್ಬಂದಿಗಳ ವಿಶೇಷ ಭತ್ಯೆಯನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಕೋರಿರುತ್ತಾರೆ.

| ಕ್ರ.ಸಂ. | ಹುದ್ದೆ | ರಾಜ್ಯಗುಪ್ತವಾರ್ತೆ ವಿಶೇಷ ಭತ್ಯೆ | ಆಂತರಿಕಾ ಭದ್ರತಾ ವಿಭಾಗದ ವಿಶೇಷ ಭತ್ಯೆ | ವ್ಯತ್ಯಾಸದ ಮೊತ್ತ ಹುದ್ದೆಗಳ ವಿವರ | ಒಟ್ಟು ವ್ಯತ್ಯಾಸದ ಮೊತ್ತ (ಮಾಹೆಯಾನ) |
|---|---|---|---|---|---|
| 1. | ಎಸ್.ಪಿ, ನಾನ್ ಐ.ಪಿ.ಎಸ್ | 3000 | 8000 | 5000*9 | 45000 |
| 2. | ಡಿವೈಎಸ್‌ಪಿ | 2500 | 7000 | 4500*39 | 175500 |
| 3. | ಪಿ.ಐ/ಆರ್.ಐ.ಪಿ | 2000 | 6000 | 4000*74 | 296000 |
| 4. | ಪಿ.ಎಸ್.ಐ/ಆರ್.ಎಸ್.ಐ | 1500 | 5000 | 3500*224 | 784000 |
| 5. | ಎ.ಎಸ್.ಐ/ಎ.ಆರ್.ಎಸ್.ಐ | 1000 | 4000 | 3000*135 | 405000 |
| 6. | ಸಿ.ಹೆಚ್.ಸಿ / ಎ.ಹೆಚ್.ಸಿ | 1000 | 4000 | 3000*483 | 1449000 |
| 7. | ಸಿ.ಪಿ.ಸಿ / ಎ.ಪಿ.ಸಿ | 800 | 4000 | 3200*316 | 1011200 |
| | | | | ಒಟ್ಟು | **41,65,700-00** |

Scanned with CamScanner

ರಾಜ್ಯ ಗುಪ್ತವಾರ್ತೆ ಅಧಿಕಾರಿ / ಸಿಬ್ಬಂದಿಗಳ ವಿಶೇಷ ಭತ್ಯೆಯನ್ನು ಆಂತರಿಕ ಭದ್ರತಾ ವಿಭಾಗದ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ದರದಂತೆಯೇ ಪರಿಷ್ಕರಿಸಲು ಕೋರಿ ರಾಜ್ಯ ಗುಪ್ತವಾರ್ತೆ ಘಟಕದ ವಿವಿಧ ದರ್ಜೆಯ ಒಟ್ಟು 1280 ಸಿಬ್ಬಂದಿಗಳಿಗೆ ವಿಶೇಷ ಭತ್ಯೆಯನ್ನು ಪರಿಷ್ಕರಿಸಲು ವಾರ್ಷಿಕವಾಗಿ ತಗಲುವ ಅಂದಾಜು ವೆಚ್ಚ ರೂ.4,99,88,400.00 ಗಳಾಗಲಿದ್ದು, ನವೆಂಬರ್ 2019 ರಿಂದ ಪೂರ್ವಾನ್ವಯವಾಗುವಂತೆ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 66 ಇಎಫ್‌ಎಸ್ 2019**

**ಬೆಂಗಳೂರು, ದಿನಾಂಕ:02.06.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯ ಗುಪ್ತವಾರ್ತೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳ ವಿಶೇಷ ಭತ್ಯೆಯನ್ನು ಆಂತರಿಕ ಭದ್ರತಾ ವಿಭಾಗದ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ದರದಂತೆಯೇ ಪರಿಷ್ಕರಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ:2055-00-101-0-03-014-ಇತರೆ ವೆಚ್ಚಗಳಡಿ ಒದಗಿಸಲಾಗಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 142 ವೆಚ್ಚ-11/2020, ದಿನಾಂಕ:02.06.2020 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಎನ್.ದೇವರಾಜ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ).

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ. 5398, ಬೆಂಗಳೂರು-560 001.
2. ಮಹಾಲೇಖಪಾಲರು (ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ. 5398, ಬೆಂಗಳೂರು-560 001.
3. ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ. 5329/5369, ಬೆಂಗಳೂರು-560 001.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು.
5. ಪೊಲೀಸ್ ಮಹಾ ನಿರ್ದೇಶಕರು, ಆಂತರಿಕ ಭದ್ರತಾ ವಿಭಾಗ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿಗಳು ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಮತ್ತು ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11), ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ), ವಿಧಾನ ಸೌಧ, ಬೆಂಗಳೂರು.
9. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

Scanned with CamScanner